ಪತ್ರಿಕೆಯ ಹೆಸರು : NAME OF THE NEWS PAPER: [illegible] ದಿನಾಂಕ : DATE : 15/12/20

# ಸಭಾಪತಿಗೆ ಅಗ್ನಿಪರೀಕ್ಷೆ

## ಇಂದಿನ ಅಧಿವೇಶನದಲ್ಲಿ ಇತಿಹಾಸ ಸೃಷ್ಟಿ

ಸಂ.ಕ.ಸಮಾಚಾರ ಬೆಂಗಳೂರು 15/12/20

ವಿಧಾನಪರಿಷತ್ತಿನ ಸಭಾಪತಿ ಪದಚ್ಯುತಿಗೆ ಸಂಬಂಧಿಸಿದಂತೆ ಅವಿಶ್ವಾಸ ನಿರ್ಣಯದ ಪ್ರಸ್ತಾವನೆ ರಾಜ್ಯಾಂಗ ಬಿಕ್ಕಟ್ಟು ಸೃಷ್ಟಿಸುವತ್ತ ದಾಪುಗಾಲಿಟ್ಟಿದೆ. ಏತನ್ಮಧ್ಯೆ ಬಿಜೆಪಿ ಸದಸ್ಯರ ಪತ್ರಸಮರ ಮಂಗಳವಾರ(ಡಿ.15) ನಡೆಯಲಿರುವ ಒಂದು ದಿನದ ವಿಶೇಷ ಅಧಿವೇಶನ ಯಾರ ಸಾರಥ್ಯದಲ್ಲಿ ನಡೆಯಲಿದೆ ಎಂಬ ಜಿಜ್ಞಾಸೆ ಹುಟ್ಟುಹಾಕಿದೆ.

ಮೇಲ್ಮನೆ ಸಭಾಪತಿ ಪ್ರತಾಪಚಂದ್ರಶೆಟ್ಟಿ ಅವರು ತಮ್ಮ ವಿರುದ್ಧ ಬಿಜೆಪಿ ಸದಸ್ಯರು ಪ್ರಸ್ತಾಪಿಸಿದ್ದ ಅವಿಶ್ವಾಸ ನಿರ್ಣಯವನ್ನು ತಾಂತ್ರಿಕ ಕಾರಣವೊಡ್ಡಿ ತಿರಸ್ಕರಿಸಿದ್ದರು. ಜೊತೆಗೆ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು. ಇವರೆಡೂ ನಿಯಮಬಾಹಿರ ಎಂದು ಆಕ್ಷೇಪಿಸಿ ಬಿಜೆಪಿ ರಾಜ್ಯಪಾಲರಿಗೆ ಮೊರೆ ಹೋಗಿ ವಿಶೇಷ ಅಧಿವೇಶನ ಸೇರಿಸುವಲ್ಲಿ ಯಶಸ್ವಿಯಾಗಿತ್ತು.

- ಸದನ ಸೇರುವ ಮುನ್ನ ಸಂಕಷ್ಟ
- ಬಿಜೆಪಿ ಸದಸ್ಯರಿಂದ ಪತ್ರ ಸಮರ
- ಕಲಾಪ ಸಾರಥ್ಯದ ಜಿಜ್ಞಾಸೆ ಶುರು
- ರಾಜ್ಯಾಂಗ ಸಂಘರ್ಷಕ್ಕೆ ರಹದಾರಿ

ಅದರಂತೆ ಕರ್ನಾಟಕ ವಿಧಾನಪರಿಷತ್ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸೇರಲಿದೆ. ಸಂತಾಪ ಸೂಚನೆ, ಗೋಹತ್ಯೆ ಶಾಸನ ರಚನೆ ಮೊದಲಾದ ಕಾರ್ಯಸೂಚಿಯೊಂದಿಗೆ ಕಲಾಪ ಪಟ್ಟಿಯೂ ಸಿದ್ಧಗೊಂಡಿತ್ತು. ಆದರೆ ದಿಢೀರ್ ವಿದ್ಯಮಾನದಲ್ಲಿ ಬಿಜೆಪಿ ಸದಸ್ಯ ಅರುಣ್‌ಶಹಾಪೂರ್ ಅವರು ಬರೆದಿರುವ ಮಹತ್ವದ ಪತ್ರ ಇದೀಗ ದಿನದ ಕಲಾಪವನ್ನೇ ದಿಕ್ಕುತಪ್ಪಿಸುವ ಸಾಧ್ಯತೆ ಗೋಚರವಾಗುತ್ತಿದೆ.

ಸಭಾಪತಿ ಪ್ರತಾಪಚಂದ್ರಶೆಟ್ಟಿ ಅವರಿಗೆ ಬರೆದಿರುವ ಪತ್ರದಲ್ಲಿ, ಅವಿಶ್ವಾಸ ನಿರ್ಣಯ ಪ್ರಸ್ತಾವನೆಯನ್ನು ಕಾನೂನು ಬಾಹಿರವಾಗಿ ತಿರಸ್ಕರಿಸಿದ್ದೀರಿ. ಅಲ್ಲದೆ ಕಲಾಪ ಸಲಹಾ ಸಮಿತಿ ಸಭೆ ತೀರ್ಮಾನದಂತೆ ಡಿ.15ರವರೆಗೂ ಅಧಿವೇಶನ ನಡೆಸುವ ನಿರ್ಧಾರವನ್ನು ಬದಿಗೊತ್ತಿ ಏಕಾಏಕಿ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದು ವಿರೋಧಿ ಕ್ರಮ. ಇಂದಿನ ಕಲಾಪದಲ್ಲಿ ಅವಿಶ್ವಾಸ ನಿರ್ಣಯದ ಕಾರ್ಯ ಸೂಚಿಯೇ ಸೇರ್ಪಡೆಯಾಗಿಲ್ಲ. ಈ ಎಲ್ಲ ಕಾರಣಕ್ಕೆ ತಾವು ಸಭಾಪತಿ ಸ್ಥಾನ ಅಲಂಕರಿಸಬಾರದು ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಉಪಸಭಾಪತಿ ಎಸ್.ಎಲ್.ಧರ್ಮೇಗೌಡ ಅವರಿಗೆ ತಾವೇ ಸಭಾಪತಿ ಸ್ಥಾನದಲ್ಲಿ ಕುಳಿತು ಮಂಗಳವಾರದ ವಿಶೇಷ ಅಧಿವೇಶನವನ್ನು ನಡೆಸಿಕೊಡುವಂತೆ ಪತ್ರದಲ್ಲಿ ತಿಳಿಸಲಾಗಿದೆ. ಜೊತೆಗೆ ವಿಧಾನಪರಿಷತ್ ಕಾರ್ಯದರ್ಶಿ ಕೆ.ಆರ್ ಮಹಾಲಕ್ಷ್ಮೀ ಅವರಿಗೂ ಪತ್ರ ಬರೆದಿದ್ದು, ಉಪಸಭಾಪತಿಗಳು ಸದನ ನಡೆಸಿಕೊಡಲು ಅಗತ್ಯ ವ್ಯವಸ್ಥೆ ಕೈಗೊಳ್ಳುವಂತೆ ಪತ್ರದಲ್ಲಿ ನಮೂದಿಸಲಾಗಿದೆ.

ವಿಶೇಷ ಸಂದರ್ಶನ

### ಪರಮಾಧಿಕಾರ ನನ್ನದೇ



ಕಾನೂನು ತಜ್ಞರ ಅಭಿಪ್ರಾಯ ಪಡೆದೇ ನನ್ನ ವಿರುದ್ಧದ ಅವಿಶ್ವಾಸ ನಿರ್ಣಯ ತಿರಸ್ಕರಿಸಲಾಗಿದೆ. ಹಾಗಾಗಿ ಕಲಾಪದಲ್ಲಿ ಇದನ್ನು ಪ್ರಸ್ತಾಪಿಸುವ ಅಥವಾ ಚರ್ಚೆಗೆ ಅವಕಾಶ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸದನ ನಡೆಸುವ ಸಂಪೂರ್ಣ ಅಧಿಕಾರ ನನಗಿದೆ.

■ ಕೆ.ಪ್ರತಾಪ್‌ಚಂದ್ರಶೆಟ್ಟಿ । ಸಭಾಪತಿ, ವಿಧಾನಪರಿಷತ್

### ಅಧ್ಯಕ್ಷರಿಗಿಲ್ಲ ಅಧಿಕಾರ



ಸಭಾಪತಿ ವಿರುದ್ಧವೇ ಅವಿಶ್ವಾಸ ನಿರ್ಣಯ ಇದ್ದಾಗ, ತಾಂತ್ರಿಕ ಕಾರಣವೊಡ್ಡಿ ಅದನ್ನು ತಿರಸ್ಕರಿಸುವ ಅಧಿಕಾರವೂ ಅಧ್ಯಕ್ಷರಿಗಿಲ್ಲ. ಅವರು ಸದನ ನಡೆಸಲು ಬರುವುದಿಲ್ಲ. ನನ್ನ ಕಾನೂನು ತಿಳಿವಳಿಕೆ ಪ್ರಕಾರ ಸದನದಲ್ಲಿ ಅದನ್ನು ಪ್ರಸ್ತಾಪಿಸಿ ಚರ್ಚೆಗೆ ಅವಕಾಶ ಕೊಡಲೇಬೇಕಾಗುತ್ತದೆ. ಅದು ಸ್ವಾಭಾವಿಕ ನ್ಯಾಯವೂ ಹೌದು.

■ ಬಿ.ವಿ.ಆಚಾರ್ಯ । ಮಾಜಿ ಅಡ್ವೋಕೇಟ್ ಜನರಲ್

### ಅವಕಾಶ ಅನಗತ್ಯ



ಅವಿಶ್ವಾಸ ನಿರ್ಣಯದ ಸೂಚನೆಗಳು ಕ್ರಮಬದ್ಧವಿಲ್ಲದ ಕಾರಣ ಸಭಾಪತಿಗಳು ತಿರಸ್ಕರಿಸಿರುವ ಹಿನ್ನೆಲೆಯಲ್ಲಿ ಇಂದಿನ ಅಧಿವೇಶನದಲ್ಲಿ ಅವಿಶ್ವಾಸ ಮಂಡನೆ ಸೂಚನಾಪತ್ರಗಳ ಮೇಲೆ ಚರ್ಚೆಗೆ ಅವಕಾಶ ನೀಡಲೇಬಾರದು.

■ ಎಸ್.ಆರ್.ಪಾಟೀಲ್ । ಮೇಲ್ಮನೆ ಪ್ರತಿಪಕ್ಷ ನಾಯಕರು

ಪೂರ್ಣ ವಿವರ ಪುಟ 4